**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ 07-10-2021</u>**

**ಪಾಟೀ ಸವಾಲು - ವಾದಿ ಪರ ವಕೀಲರಿಂದ**

4) ಪ್ರತಿವಾದಿ ನಾರಾಯಣಪ್ಪ ನನಗೆ ಮಾವ ಅಂದರೆ ನನ್ನ ಹೆಂಡತಿಯ ತಂದೆ ಇರುತ್ತಾರೆ. ನನ್ನ ಹೆಂಡತಿಯ ಹೆಸರು ಜ್ಯೋತಿ ಲಕ್ಷ್ಮೀ. ದಾವಾ ಸ್ವತ್ತು ನಾರಾಯಣಪ್ಪ ಖರೀದಿ ಮಾಡುವ ಮುಂಚೆ ಮೂಲತಃ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಅದು ವೆಂಕಟಪ್ಪನ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ವೆಂಕಟಪ್ಪನಿಂದ ನನ್ನ ಮಾವನ ಹೆಸರಿಗೆ ಯಾವ ವಿಧಾನದಲ್ಲಿ ಖಾತೆ ಬದಲಾವಣೆ ಆಯಿತು ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಾನು ನಾರಾಯಣಪ್ಪನ ಮಗಳನ್ನು ಮದುವೆಯಾಗಿದ್ದು 1990 ರಲ್ಲಿ. ನಾನು ಮತ್ತು ನನ್ನ ಮಾವ ಪರಸ್ಪರ ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕಿರಿಯ ವಿಭಾಗ ನ್ಯಾಯಾಲಯದಲ್ಲಿ ಒ.ಎಸ್.ನಂ.422/2005 ದಾಖಲಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ತಡೆಯಾಜ್ಞೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವನಿಗೆ ಒಟ್ಟು ಆರು ಜನ ಮಕ್ಕಳಿದ್ದಾರೆ. ಅವರಲ್ಲಿ ಇಬ್ಬರು ಪವತಿಯಾಗಿದ್ದಾರೆ. ನನ್ನ ಮಾವನ ಮಕ್ಕಳ ಹೆಸರುಗಳು ವೆಂಕಟೇಗೌಡ, ವಿಜಯಲಕ್ಷ್ಮಮ್ಮ, ಭಾಗ್ಯಮ್ಮ ಮತ್ತು ದಿನೇಶ. ನಾನು ನನ್ನ ಮಾವನ ಎಲ್ಲಾ ಆಸ್ತಿಗಳ ಬಗ್ಗೆ ವಿವರಗಳನ್ನು ತಿಳಿದುಕೊಂಡಿಲ್ಲ. ನನ್ನ ಮಾವ

ಮತ್ತು ಆತನ ಮಕ್ಕಳ ನಡುವೆ ವಿಭಾಗವಾಗಿದೆಯೇ? ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.